**ಸಾಕ್ಷಿಯನ್ನು ದಿಃ 24.7.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಬಿ.ವೈ.ಆರ್ ವಕೀಲರಿಂದಃ**

ಆರೋಪಿಯು ಬೆಮೆಲ್ ನಲ್ಲಿ ಗುತ್ತಿಗೆ ನೌಕರನಾಗಿ ಕೆಲಸ ಮಾಡುತ್ತಾರೆ. ಆರೋಪಿಯ ತಿಂಗಳ ಆದಾಯ 25,000/- ಇರಬಹುದು. ಚೆಕ್ಕಿನಲ್ಲಿರುವ ನಮೂದುಗಳನ್ನು ಆರೋಪಿಯೇ ಮಾಡಿರುತ್ತಾರೆ. ನಿ ಪಿ 1 ರ ಮೇಲೆ ಇರುವ ಸಹಿ ಆರೋಪಿಯದ್ದಲ್ಲ ಎಂದರೆ ಸರಿಯಲ್ಲ. ನಿ ಪಿ 1 ರ ನಮೂದುಗಳು ಬರೆದಿರುವುದಕ್ಕೆ ಪ್ರಯತ್ಯ ಸಾಕ್ಷಿ ಇಲ್ಲ ಎಂದರೆ ಸರಿ. ನಾನು ಆದಾಯ ತೆರಿಗೆ ಪಾವತಿದಾರನಲ್ಲ. ನಾನು ಹಣ ಸಂದಾಯ ಮತ್ತು ವ್ಯವಹಾರಗಳ ಬಗ್ಗೆ ಯಾವುದೇ ಪುಸ್ತಕವನ್ನು ಅಥವಾ ದಾಖಲೆಯನ್ನು ನಿರ್ವಹಿಸಿಲ್ಲ. ನಾನು 6 ಲಕ್ಷ ರೂ. ಆರೋಪಿಗೆ ಕೊಟ್ಟ ಬಗ್ಗೆ ನಿ ಪಿ 1 ನ್ನು ಹೊರತು ಪಡಿಸಿ ಬೇರೆ ಯಾವುದೇ ದಾಖಲೆ ಇರುವುದಿಲ್ಲ. ನನ್ನ ಲೀಗಲ್ ನೋಟೀಸಿನಲ್ಲಿ ಅಥವಾ ದೂರಿನಲ್ಲಿ ನಾನು ಆರೋಪಿಗೆ ಇಂತಹದ್ದೇ ನಿಖರವಾದ ದಿನಾಂಕದಂದು ದುಡ್ಡು ಕೊಟ್ಟಿದ್ದೇನೆ ಎಂದು ನಮೂದು ಮಾಡಿಲ್ಲ. ನಾನು ಬಡ್ಡಿಗಾಗಿ ಹಣವನ್ನು ಆರೋಪಿಗೆ ನೀಡಿಲ್ಲ. ಆರೋಪಿ ಮತ್ತು ಕುಟುಂಬದವರು ನನ್ನ ಸ್ನೇಹಿತರಾದ ಕಾರಣ ಬಡ್ಡಿ ಇಲ್ಲದೆ ಹಣವನ್ನು ಕೊಟ್ಟೆ. ಆರೋಪಿಯ ಹೆಸರಿನಲ್ಲಿ ಒಂದು ಮನೆ ಇರುತ್ತದೆ.

ನನ್ನ ಹೆಸರಿನಲ್ಲಿ 2 ಬ್ಯಾಂಕ್ ಖಾತೆಗಳಿವೆ. 2024 ರ ಜನವರಿಯ ಬ್ಯಾಂಕಿನ ಖಾತಾ ಜಮಾವಣಾ ವರದಿಯನ್ನು ನಾನು ನ್ಯಾಯಾಲಯಕ್ಕೆ ನೀಡಿಲ್ಲ. ನನ್ನ ಮತ್ತು ಆರೋಪಿಯ ನಡುವೆ ನಡೆದ ಹಣದ ವ್ಯವಹಾರಕ್ಕೆ ಯಾವ ಪ್ರತ್ಯಕ್ಷ ಸಾಕ್ಷಿಗಳು ಇರುವುದಿಲ್ಲ.

ಈ ಪ್ರಕರಣವನ್ನು ಹೊರತು ಪಡಿಸಿ ನಾನು ಇನ್ನೂ 2 ಚೆಕ್ ಬೌನ್ಸ್ ಪ್ರಕರಣಗಳನ್ನು ಈ ನ್ಯಾಯಾಲಯದಲ್ಲಿ ದಾಖಲಿಸಿದ್ದೇನೆ. ಎಲ್ಲಾ ಪ್ರಕರಣಗಳು ನನ್ನ ಪರವಾಗಿ ಆಗಿದೆ, 1 ದೂರು ನನ್ನ ವಿರುದ್ಧವಾಗಿ ನಿರ್ಣಯವಾಗಿದೆ, ಅದನ್ನು ನಾನು ಮೇಲ್ಮನವಿ ಸಲ್ಲಿಸಿದ್ದೇನೆ. 2 ಪ್ರಕರಣಗಳು ರಾಜಿಯಲ್ಲಿ ಅಂತ್ಯಗೊಂಡಿದೆ. 1 ಪ್ರಕರಣ ಮಾತ್ರ ಉಚ್ಚ ನ್ಯಾಯಾಲಯದಲ್ಲಿ ಬಾಕಿ ಇದೆ. ಪ್ರಸ್ತುತವಾಗಿ

ನಾನು ಹೊಸ ದೂರವಾಣಿ ತೆಗೆದುಕೊಂಡ ಕಾರಣ ಆರೋಪಿಯ ದೂರವಾಣಿ ಸಂಖ್ಯೆ ನನ್ನ ಬಳಿ ಇಲ್ಲ. ನಾನು ಆರೋಪಿಯ ಜೊತೆ ದೂರವಾಣಿಯಲ್ಲಿ ಮಾತನಾಡುತ್ತಿದ್ದು ಅದರ ಬಗ್ಗೆ ದಾಖಲೆ ಇಲ್ಲ. ಬೇರೆ ವ್ಯವಹಾರ ಮಾಡಿದ ಬಗ್ಗೆಯೂ ಆಧಾರ ಇಲ್ಲ. ಆರೋಪಿಯ ಆಧಾರ್ ಕಾರ್ಡ್ ನನ್ನ ಬಳಿ ಇಲ್ಲ.

ದಿನಾಂಕ 12.2.2024 ರಂದು ಬೆಮೆಲ್ ನಗರದಿಂದ ಬಂಗಾರಪೇಟೆಗೆ ಬರುವಾಗ ಆರೋಪಿಯು 5 ಚೆಕ್ಕುಗಳನ್ನು ಕಳೆದುಕೊಂಡಿದ್ದು, ತದನಂತರ ಬಂಗಾರಪೇಟೆ ಪೋ. ಠಾಣೆ ಮತ್ತು ಬಂಧನ್ ಬ್ಯಾಂಕಿನಲ್ಲಿ ದಿನಾಂಕ 28.2.2024 ನಲ್ಲಿ ನೋಂದಾಯಿತ ಅಂಚೆ ಮೂಲಕ ದೂರು ದಾಖಲಿಸಿದ್ದಾರೆ ಎಂದರೆ ಸರಿಯಲ್ಲ. ತದನಂತರ ನಿ ಪಿ 1 ನನಗೆ ಸಿಕ್ಕಿ ಅದನ್ನು ದುರುಪಯೋಗ ಪಡಿಸಿಕೊಂಡು ಈ ದೂರನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಆರೋಪಿಯನ್ನು ನ್ಯಾಯಾಲಯದಲ್ಲಿಯೇ ಮೊದಲ ಬಾರಿ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ನನ್ನ ಬಳಿ ಯಾವುದೇ ಹಣ ತೆಗೆದುಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿ ನಿ ಪಿ 1 ನ್ನು ನನಗೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಯ ವಿರುದ್ಧ ಸುಳ್ಳು ದೂರು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

**(ಚಂದ್ರಶೇಖರ್ ಅಲಬೂರ್)**
1 ನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಬಂಗಾರಪೇಟೆ